# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 359 ಪಿಜಿಸಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 05.09.2015

## ಅಧಿಸೂಚನೆ

**ವಿಷಯ:** 1 ರಿಂದ 5ನೇ ತರಗತಿಯ ಆಂಗ್ಲ ಮಾಧ್ಯಮ ಖಾಸಗಿ ಹೊಸ ಶಾಲೆ ನೋಂದಣಿ ಮತ್ತು 1 ರಿಂದ 10ನೇ ತರಗತಿಯವರೆಗೆ ಉರ್ದು/ಮರಾಠಿ/ಇತರೆ ಮಾಧ್ಯಮ ಖಾಸಗಿ ಹೊಸ ಶಾಲೆ ನೋಂದಣಿ ಶುಲ್ಕ ಪರಿಷ್ಕರಿಸುವ ಬಗ್ಗೆ.

******

ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30 ಮತ್ತು 31 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಮತ್ತು ನೊಂದಣಿ) ನಿಯಮಗಳು, 1997 ಸೆಕ್ಷನ್ (3)ರರಡಿಯಲ್ಲಿ ಹೊರಡಿಸಲಾಗಿದ್ದ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 34 ವಿವಿಧ 2003 ದಿನಾಂಕ 26.05.2003 ಮತ್ತು ಇಡಿ 63 ಎಸ್‌ಇಎಸ್ 2004 ದಿನಾಂಕ 12.08.2005 ರಲ್ಲಿ ಹೊರಡಿಸಲಾಗಿದ್ದ ಆದೇಶದಲ್ಲಿನ ಹೊಸ ಶಾಲೆ ನೊಂದಣಿ ಸಂಬಂಧ ಆಡಳಿತ ಮಂಡಳಿಯು ಸಲ್ಲಿಸುವ ನೊಂದಣಿ ಶುಲ್ಕ, ಅರ್ಹ ನೊಂದಾಯಿತ ಆಡಳಿತ ಮಂಡಳಿಗಳು ವಿವಿಧ ಹಂತಗಳಲ್ಲಿ ಇಲಾಖೆ ಪ್ರಸ್ತಾವನೆಗಳು ಸಲ್ಲಿಸುವ ದಿನಾಂಕವನ್ನು ಹಾಗೂ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ 2009ರ ಸೆಕ್ಷನ್ 19 & 25ರಲ್ಲಿ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ನಿಗಧಿಪಡಿಸಬೇಕಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿಜಿಸಿ 2014: ದಿನಾಂಕ:11-11-2014 ಮತ್ತು ತಿದ್ದುಪಡಿ ಸಂಖ್ಯೆ: ಇಡಿ 369 ಪಿಜಿಸಿ 2014: ದಿನಾಂಕ:02-05-2015ರಲ್ಲಿ 1ನೇ ತರಗತಿಯಿಂದ 10ನೇ ತರಗತಿ ಕನ್ನಡ ಮಾಧ್ಯಮ ಶಾಲೆಗಳು ಹಾಗೂ 6 ರಿಂದ 10ನೇ ತರಗತಿವರೆಗೆ ಆಂಗ್ಲ ಮಾಧ್ಯಮ ಶಾಲೆಗಳಿಗೆ ಸಂಬಂಧಪಟ್ಟಂತೆ ಪರಿಷ್ಕೃತ ನೋಂದಣಿ ಶುಲ್ಕ, ಸಂಸ್ಕರಣ ಶುಲ್ಕ ಹಾಗೂ ಮೂಲಭೂತ ಸೌಕರ್ಯಗಳನ್ನು ನಿಗಧಿಪಡಿಸಲಾಗಿದೆ.

ಈ ಕೆಳಕಂಡ ಪರಿಷ್ಕೃತಗೊಳಿಸಿದ ಅಂಶಗಳಂತೆ ಹೊಸದಾಗಿ 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಖಾಸಗಿ ಪ್ರಾಥಮಿಕ ಶಾಲೆ ಮತ್ತು 1 ರಿಂದ 10ನೇ ತರಗತಿಯವರೆಗೆ ಉರ್ದು/ಮರಾಠಿ/ಇತರೆ ಮಾಧ್ಯಮಗಳ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ತೆರೆಯುವ ಸಂಬಂಧ ಕ್ರಮವಹಿಸಲು ಸೂಚಿಸಿದೆ.

**ಹೊಸ ಶಾಲಾ ನೊಂದಣಿ ಶುಲ್ಕ:**

| ಕ್ರ.ಸಂ | ತರಗತಿ / ಮಾಧ್ಯಮ | ನೊಂದಣಿ ಶುಲ್ಕ | ಸಂಸ್ಕರಣ ಶುಲ್ಕ |
|---|---|---|---|
| 1 | 1-5ನೇ ತರಗತಿ ಆಂಗ್ಲ ಮಾಧ್ಯಮ | ರೂ. 25,000 | ರೂ. 10,000 |
| 2 | 1-5ನೇ ತರಗತಿ ಉರ್ದು/ಮರಾಠಿ /ಇತರೆ ಮಾಧ್ಯಮ | ರೂ. 25,000 | ರೂ. 10,000 |
| 3 | 6-8ನೇ ತರಗತಿ ಉರ್ದು/ಮರಾಠಿ /ಇತರೆ ಮಾಧ್ಯಮ | ರೂ. 50,000 | ರೂ. 20,000 |
| 4 | 9-10ನೇ ತರಗತಿ ಉರ್ದು/ಮರಾಠಿ /ಇತರೆ ಮಾಧ್ಯಮ | ರೂ. 50,000 | ರೂ. 20,000 |

ಅರ್ಹ ನೊಂದಾಯಿತ ಆಡಳಿತ ಮಂಡಳಿಗಳು ವಿವಿಧ ಹಂತಗಳಲ್ಲಿ ಇಲಾಖೆ ಪ್ರಸ್ತಾವನೆಗಳು ಸಲ್ಲಿಸುವ ದಿನಾಂಕ: ಪ್ರತಿ ವರ್ಷದ **31** ಅಕ್ಟೋಬರ್ ಆಗಿರುತ್ತದೆ. ಈಗಾಗಲೇ ಸ್ವೀಕೃತವಾಗಿರುವ **2015–16**ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಹೊಸದಾಗಿ ಪ್ರಾರಂಭಿಸಲು ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ನೊಂದಣಿ ಮಾಡಲು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಕ್ರಮಕ್ಕೈಗೊಳ್ಳುವುದು.

ಶಾಲಾ- ಶೈಕ್ಷಣಿಕ ವಾತಾವರಣ ಅತ್ಯುತ್ತಮವಾಗಿ ಕಲ್ಪಿಸಬೇಕಾದ ಮೂಲಭೂತ. ಸೌಕರ್ಯಗಳು:

1. 1 ರಿಂದ 8ನೇ ತರಗತಿಯವರೆಗೆ ಶಾಲೆ ಪ್ರಾರಂಭಿಸಲು ಗ್ರಾಮೀಣ ಪ್ರದೇಶ/ನಗರಸಭೆ /ಪುರಸಭೆ/ಪಟ್ಟಣ ಪಂಚಾಯತಿ/ಮಹಾನಗರ ಪಾಲಿಕೆಗಳ ವ್ಯಾಪ್ತಿಯ (ಬಿ.ಬಿ.ಎಂ.ಪಿ ಯನ್ನು ಹೊರತುಪಡಿಸಿ) ಪ್ರದೇಶದಲ್ಲಿ ಕನಿಷ್ಠ ಒಂದು ಎಕರೆ ಪರಿವರ್ತಿತ ಭೂಮಿ/ಗ್ರಾಮ ಪಂಚಾಯಿತಿ ಇತ್ಯಾದಿ ಪ್ರಾಧಿಕಾರದಿಂದ ಶೈಕ್ಷಣಿಕ ಉದ್ದೇಶಗಳಿಗೆ ಲೈಸನ್ಸ್ ಮುಖಾಂತರ ಬಳಸಬಹುದಾದ ಕನಿಷ್ಠ ಒಂದು ಎಕರೆ ಭೂಮಿ–ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿರಬೇಕು (1 ರಿಂದ 10ನೇ ತರಗತಿಯವರೆಗೆ ಒಂದೇ ಆವರಣದಲ್ಲಿ ಶಾಲೆ ಪ್ರಾರಂಭಿಸಲು ಒಂದು ಎಕರೆ ಹೊಂದಿರಬೇಕು. ಪ್ರತ್ಯೇಕವಾಗಿ 9 ಮತ್ತು 10ನೇ ತರಗತಿಯ ಪ್ರೌಢಶಾಲೆ ಪ್ರಾರಂಭಿಸಲು ಸಹ 1 ಎಕರೆ ಭೂಮಿ ಇರಬೇಕು)

2. ಬಿ.ಬಿ.ಎಂ.ಪಿ ಪ್ರದೇಶಗಳಲ್ಲಿ 1 ರಿಂದ 8ನೇ ತರಗತಿ ಶಾಲೆಗಳಿಗೆ ಕನಿಷ್ಠ ಅರ್ಧ ಎಕರೆ ಪರಿವರ್ತಿತ ಭೂಮಿ ಆಡಳಿತ ಮಂಡಳಿಯ ಸ್ವಂತ ಹೆಸರಿನಲ್ಲಿ ಇರಬೇಕು ಅಥವಾ ಸದರಿ ಭೂಮಿಯು 30 ವರ್ಷಗಳ ಲೀಸ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿರಬೇಕು. 1 ರಿಂದ 8ನೇ ತರಗತಿಯ ಜೊತೆಗೆ 9 ಮತ್ತು 10ನೇ ತರಗತಿಗಳನ್ನು ಹೊಂದಲು ಇಚ್ಛಿಸುವ ಶಾಲೆಗಳು ಒಂದು ಎಕರೆ ಕನಿಷ್ಠ ಭೂಮಿ ಸ್ವಂತ ಹೆಸರಿನಲ್ಲಿರಬೇಕು.

3. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 9 ಮತ್ತು 10ನೇ ತರಗತಿಗಳನ್ನು ಪ್ರತ್ಯೇಕವಾಗಿ ತೆರೆಯಲು ಅರ್ಧ ಎಕರೆ ಕನಿಷ್ಠ ಭೂಮಿ ಸವಂತ ಹೆಸರಿನಲ್ಲಿ ಅಥವಾ 30 ವರ್ಷಗಳ ಲೀಜ್ ಅವಧಿಗೆ ಸಂಸ್ಥೆಯ ಹೆಸರಿನಲ್ಲಿರಬೇಕು.

4. ಕಿರಿಯ ಪ್ರಾಥಮಿಕ ಶಾಲೆಗೆ 18*20 ಅಡಿ ಅಳತೆಯ ಕನಿಷ್ಠ 05 ಕೊಠಡಿಗಳು, ಹಿರಿಯ ಪ್ರಾಥಮಿಕ ಶಾಲೆಗೆ 18*20 ಅಡಿ ಅಳತೆಯ ಕನಿಷ್ಠ 08 ಕೊಠಡಿಗಳು ಮತ್ತು ಪ್ರೌಢಶಾಲೆಗೆ 18*20 ಅಡಿ ಅಳತೆಯ ಕನಿಷ್ಠ 09 ಕೊಠಡಿಗಳನ್ನು ಹೊಂದಿರಬೇಕು.

5. ಬಾಲಕರ ಶೌಚಾಲಯ 04 ಮತ್ತು ಬಾಲಕಿಯರ ಶೌಚಾಲಯ 04 ರಂತೆ ಒಟ್ಟು ಕನಿಷ್ಠ 08 ಶೌಚಾಲಯಗಳನ್ನು ಹೊಂದಿರಬೇಕು.

6. ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕುಡಿಯುವ ನೀರು ಒಳಗೊಂಡಂತೆ ಇತರೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡಿರಬೇಕು.

7. ಉಳಿದ ಜಾಗವನ್ನು ಆಟದ ಮೈದಾನಕ್ಕೆ ಮೀಸಲಿಟ್ಟು ಸುತ್ತ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರಬೇಕು.

8. ಶಾಲೆಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಶಿಕ್ಷಣ ಇಲಾಖೆ ಮತ್ತು ಗೃಹ ಇಲಾಖೆಗಳು ಹೊರಡಿಸಿರುವ ಮಾರ್ಗಸೂಚಿಯನ್ವಯ ಎಲ್ಲಾ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಅಗತ್ಯ ಎಲ್ಲಾ ಭದ್ರತಾ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸಿರಬೇಕು.

9. ಶಾಲೆಗಳ ಕನಿಷ್ಠ ಭದ್ರತಾ ಠೇವಣಿಯು ಕಿರಿಯ ಪ್ರಾಥಮಿಕ ಶಾಲೆಗೆ 1.00 ಲಕ್ಷ, ಹಿರಿಯ ಪ್ರಾಥಮಿಕ ಶಾಲೆಗೆ 2.00 ಲಕ್ಷಗಳಂತೆ ಠೇವಣಿಯನ್ನು ಮತ್ತು ಪ್ರೌಢಶಾಲೆಗೆ 3.00 ಲಕ್ಷಗಳಂತೆ ಠೇವಣಿಯನ್ನು ಸರ್ಕಾರ ಮತ್ತು ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸಿರಬೇಕು.

10. ಶಾಲೆಗಳನ್ನು ಇಲಾಖೆಯ ಪೂರ್ವಾನುಮತಿ ಪಡೆಯದೆ ಬೇರೆ ಆಡಳಿತ ಮಂಡಳಿ/ಸಂಸ್ಥೆಗೆ ಪರಭಾರೆ ಮಾಡಬಾರದೆಂದು ಷರತ್ತನ್ನು ವಿಧಿಸುವುದು.

11. ಶಾಳೆಗಳನ್ನು ಮುಚ್ಚುವಂತ ಸಂದರ್ಭ ಬಂದಾಗ ಶಾಲೆಯನ್ನು ಮುಚ್ಚುವ ಮುನ್ನ ಇಲಾಖೆಯ ಪೂರ್ವಾನುಮತಿಯನ್ನು ಪಡೆದು ಶಾಲೆಯಲ್ಲಿನ ಎಲ್ಲಾ ಶೈಕ್ಷಣಿಕ ದಾಖಲಾತಿಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸುಪರ್ದಿಗೆ ನೀಡಬೇಕು.

12. ಹೊಸ ಶಾಲೆ ಮಂಜೂರಾತಿ ಕೋರಿಕೆಯು ತಿರಸ್ಕೃತಗೊಂಡ ಸಂದರ್ಭದಲ್ಲಿ ಆಡಳಿತ ಮಂಡಳಿಯು ಪಾವತಿಸಿರುವ. ನೊಂದಣಿ ಶುಲ್ಕವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು. ಆದರೆ, ಸಂಸ್ಕರಣ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.

| Sl.No | Item | Norms and standards<br>Facility | Remarks<br>Specifications |
|---|---|---|---|
| 1 | Building | All whether building consisting of- | |
| | | (i) At least one class room for every teacher and an office-cum-store-cum head teacher's room. | |
| | | (ii) Barrier free access | |
| | | (iii) Separate toilets for boys and girls. | |
| | | (iv) Safe and adequate drinking water facility to all children. | |
| | | (v) A kitchen where mid-day meal is cooked in the school | |
| | | (vi) Playground | ***For First class to Fifth Class :-*** |
| | | (vii)Arrangement for securing the school building by boundary wall or fencing. | Five class rooms |
| | | | one Head teacher room |
| | | | one staff room |
| | | | (Each room measures 18X20 Sft) |
| | | | 08 toilets (4 for boys and 4 for girls) |
| | | | Safe and adequate drinking water facility to all children. |
| | | | A kitchen where mid-day meal is cooked in the school |
| | | | Arrangement for securing the school building by boundary wall or fencing |
| | | | |
| | | | ***For sixth class to eight class:-*** |
| | | | Three class rooms |
| | | | one Head teacher room |
| | | | one staff room |
| | | | one sports room |
| | | | one lab & one library room |
| | | | (Each room measures 18X20 Sft) |

| | | | |
|---|---|---|---|
| | | | 04 toilets (2 for boys and 2 for girls) |
| | | | Safe and adequate drinking water facility to all children. |
| | | | A kitchen where mid-day meal is cooked in the school |
| | | | Arrangement for securing the school building by boundary wall or fencing |
| | | | |
| | | | ***For First class to Eight class:-*** |
| | | | Eight class rooms |
| | | | one Head teacher room |
| | | | one staff room |
| | | | one sports room |
| | | | one lab & one library room |
| | | | (Each room measures 18X 20 Sft) |
| | | | 08 toilets (4 for boys and 4 for girls) |
| | | | Safe and adequate drinking water facility to all children. |
| | | | A kitchen where mid-day meal is cooked in the school |
| | | | Arrangement for securing the school building by boundary wall or fencing |
| | | | |
| | | | Note:- |
| | | | 1)Physical Infrastructure shall be provided in an area measuring worthy of a school premises and section -4 of Karnataka Education Institution (Classification Regulation act) Rules 1995, shall be referred to in the context. |
| | | | |
| | | | 2)In addition to the above facilities school shall provide sufficient area for play ground, enough for all the students in the institution to assemble and to play and watch at least two outdoor games at one time |
| | | | |
| | | | 3) The facilities stipulated is for a school having single section per class. Additional sections shall have proportionate additional infrastructure. |

| | | | |
|---|---|---|---|
| 4 | ಪ್ರೌಢಶಾಲೆ 9 ರಿಂದ 10ನೇ ತರಗತಿ. | ಒಂದು ಎಕರೆ ಭೂ ಪರಿವರ್ತಿತ ಜಮೀನು ಹೊಂದಿದ್ದು, (ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಅರ್ಧ ಎಕರೆ ಹೊಂದಿರಬೇಕು). ಈ ಜಾಗದಲ್ಲಿ 18*20 ಅಳತೆಯ ಕನಿಷ್ಠ 09 ಕೊಠಡಿಗಳನ್ನು ಹೊಂದಿದ್ದು, ಹಾಗೂ 04 ಶೌಚಾಲಯಗಳನ್ನು ಹೊಂದಿರಬೇಕು (2 ಹೆಣ್ಣು ಮಕ್ಕಳಿಗೆ, 2 ಗಂಡು ಮಕ್ಕಳಿಗೆ) ಹಾಗೂ ಉಳಿದ ಜಾಗ ಆಟದ ಮೈದಾನಕ್ಕೆ ಮೀಸಲಿಟ್ಟು ಶಾಲಾ ಆವರಣದಲ್ಲಿ ಕಾಂಪೌಂಡ್ ನಿರ್ಮಿಸಿರಬೇಕು. | 9 ರಿಂದ 10ನೇ ತರಗತಿಯವರೆಗೆ 2 ತರಗತಿ ಕೊಠಡಿಗಳು, 1 ಮುಖ್ಯ ಶಿಕ್ಷಕರ ಕೊಠಡಿ, 1 ಸಿಬ್ಬಂದಿ ಕೊಠಡಿ, 1 ಕಾರ್ಯಾಲಯ, 1 ಕ್ರೀಡಾಕೊಠಡಿ, 2 ಪ್ರಯೋಗಾಲಯ ಹಾಗೂ 1 ಸ್ಕೌಟ್ಸ್ ಅಂಡ್ ಗೈಡ್ಸ್. The facilities stipulated is for a school having single section per class. Additional sections shall have proportionate additional infrastructure. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಹೆಚ್.ಎಸ್. ಹೊನ್ನೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಪ್ರಾಥಮಿಕ)

ಸಂಕಲನಕಾರರು, ಕರ್ನಾಟಕ ರಾಜ್ಯ ವಿಶೇಷ ಪತ್ರ, ಬೆಂಗಳೂರು – ಈ ಅಧಿಸೂಚನೆಯನು ಕರ್ನಾಟಕ ರಾಜ್ಯ ವಿಶೇಷ ಪತ್ರದಲ್ಲಿ ಪ್ರಕಟಿಸಿ, ಪ್ರಕಟಿತ 500 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಇವರಿಗೆ :

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ ಗುಲ್ಬರ್ಗ,
3) ನಿರ್ದೇಶಕರು, ಪ್ರಾಥಮಿಕ/ಪ್ರೌಢ/ಭಾಷಾ ಅಲ್ಪಸಂಖ್ಯಾತ ಶಾಲೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗಾ.
4) ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು,
5) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ)/ ಉಪನಿರ್ದೇಶಕರು (ಅಭಿವೃದ್ಧಿ)/ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು – ಸಂಬಂಧಿಸಿದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ

ಪ್ರತಿಗಳು :–

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು,
3. ಸರ್ಕಾರದ ಅಪರ/ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು